**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 960/2019**

ಸಿ ಡಬ್ಲ್ಯೂ -17

ಪಿ ಡಬ್ಲ್ಯೂ-12

**ಸಾಕ್ಷಿದಾರರ ಹೆಸರು** : ಸುನೀಲಕುಮಾರ ಹೆಚ್

**ತಂದೆ/ಗಂಡನ ಹೆಸರು** : ಮಂಜುನಾಥ ಹೆಚ್ ಬಿ

**ವಯಸ್ಸು** : 44 ವರ್ಷ

**ಉದ್ಯೋಗ** : ಪಿ.ಐ , ಹೊನ್ನಾಳಿ ಪೋಲಿಸ್ ಠಾಣೆ

**ವಾಸ** : ಹೊನ್ನಾಳಿ

**ದಿನಾಂಕಃ 03.09.2025. ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು ದಿನಾಂಕ 08.08.2018 ರಿಂದ ದಿನಾಂಕ 12.08.2019 ರವರೆಗೆ ರಾಣೇಬೆನ್ನೂರು ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 26.03.2019 ರಂದು ರಾತ್ರಿ 02.00 ಗಂಟೆಯಲ್ಲಿ ನಾನು ಠಾಣೆಯಲ್ಲಿದ್ದಾಗ ಈ ಕೇಸಿನ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಅದರ ಆದಾರದ ಮೇಲೆ ಠಾಣಾ ಗುನ್ನಾ ನಂ.60/2019 ರಂತೆ ಪ್ರಕರಣ ದಾಖಲು ಮಾಡಿಕೊಂಡು ದೂರು ಹಾಗೂ ಎಫ್ ಐ ಆರ್ ನ್ನು ಠಾಣಾ ಸಿಬ್ಬಂದಿ ಮುಖಾಂತರ ಕಳಹಿಸಿಕೊಟ್ಟಿರುತ್ತೇನೆ. ದೂರನ್ನು ಈಗಾಗಲೇ ನಿ ಪಿ -1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ -1 ಬಿ ಎಂದು ಗುರುತಿಸಲಾಯಿತು. ಎಫ್ ಐ ಆರ್ ನ್ನು ನಿ ಪಿ -11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ -11 ಎ ಎಂದು ಗುರುತಿಸಲಾಯಿತು. ಅದೇ ದಿವಸ ಪಿರ್ಯಾದಿದಾರರು ಹಾಜರುಪಡಿಸಿದ 3 ಜನ ಆರೋಪಿತರನ್ನು ಹಾಜರುಪಡಿಸಿದ್ದು ಸದರಿಯವರನ್ನು ದಸ್ತಗಿರಿ ಮಾಡಿ ಸದರಿಯವರನ್ನು ವಿಚಾರಣೆ ಮಾಡಿ ಅವರ ಸ್ವ ಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-5 ರವರು ತೋರಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ 09-10 ಗಂಟೆಯವರೆಗೆ ಪಂಚನಾಮೆ

ಸಿ ಡಬ್ಲ್ಯೂ -17

ಪಿ ಡಬ್ಲ್ಯೂ-12

ಮಾಡಿ ಆ ಕಾಲಕ್ಕೆ ಕೆ ಎ 27 ಇ ಎಲ್ 7724 ವಾಹನವನ್ನು ವಶಪಡಿಸಿಕೊಂಡು ಠಾಣಾ ಸ್ವತ್ತು ಪಟ್ಟಿ ನಂ.25/2019 ರಂತೆ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸ್ಥಳ ಪಂಚನಾಮೆಯನ್ನು ನಿ ಪಿ -6 ಎಂದು, ಸಾಕ್ಷಿಯ ಸಹಿಯನ್ನು ನಿಪಿ -6 ಸಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿ ಪಿ -2 ಮತ್ತು 3 ರಂತೆ ಪೋಟೋಗಳನ್ನು ತೆಗೆದಿರುತ್ತೇನೆ. ಅದೇ ದಿನ 1 ನೇ ಆರೋಪಿತ ಮದು ರವರು ತೋರಿಸಿದಂತೆ ಗುನ್ಹಾ ಸ್ಥಳದ ಪಂಚನಾಮೆಯನ್ನು ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ 10.15 ರಿಂದ 11.00 ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ಆ ಕಾಲಕ್ಕೆ ನಿ ಪಿ -4 ಮತ್ತು 5 ರಂತೆ ಪೋಟೋಗಳನ್ನು ತೆಗೆದಿರುತ್ತೇನೆ. ಆರೋಪಿತ ತೋರಿಸಿದ ಸ್ಥಳ ಪಂಚನಾಮೆಯನ್ನು ನಿ ಪಿ -12 ಎಂದು, ಸಾಕ್ಷಿಯ ಸಹಿಯನ್ನು ನಿಪಿ -12 ಎ ಎಂದು ಗುರುತಿಸಲಾಯಿತು. ನಂತರ 3 ಜನ ಆರೋಪಿತರನ್ನು ವೈದ್ಯಕೀಯ ಪರೀಕ್ಷೆ ಮಾಡಿ ಮಾನ್ಯ ನ್ಯಾಯಾಲಯಕ್ಕೆ ರಿಮ್ಯಾಂಡ್ ಅರ್ಜಿಯ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ-4 ರಿಂದ 16 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 27.03.2019 ರಂದು ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಆರೋಪಗಳು ದೃಡಪಟ್ಟ ಕಾರಣ ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ 2 ನೇ ಆರೋಪಿತನನ್ನು ನೋಡಿ ಗುರುತಿಸುತ್ತೇನೆ. 3 ನೇ ಆರೋಪಿತ ಗೈರು ಹಾಜರಿದ್ದು ಅವರು ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ಆರೋಪಿತನ ಪರ ವಕೀಲರು ಹೇಳಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**ಪಾಟೀ ಸವಾಲು ಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಸ್.ಎನ್.ಕೆ ವಕೀಲರಿಂದಃ**

ಚಾಸಾ-1 ರವರು ಠಾಣೆಗೆ ಹಾಜರಾಗಿ ಪಿರ್ಯಾದಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಸಮಕ್ಷಮ ಸ್ವ ಇಚ್ಚಾ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿಲ್ಲ ಮತ್ತು ಚಾಸಾ-5 ರವರು ನನಗೆ ಸ್ಥಳ ತೋರಿಸಿಲ್ಲ ಹಾಗೂ ನಾನು ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಸಿ ಡಬ್ಲ್ಯೂ -17

ಪಿ ಡಬ್ಲ್ಯೂ-12

ಪಂಚನಾಮೆಯ ಸಮಯದಲ್ಲಿ ಕೆ ಎ 27 ಇ ಎಲ್ 7724 ನೇದ್ದನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತ ಸ್ಥಳ ತೋರಿಸಿದ ಪಂಚನಾಮೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-4 ರಿಂದ ಚಾಸಾ-16 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಹಾಗೂ ಆರೋಪಿತರು ಎನೂ ತಪ್ಪು ಮಾಡದಿದ್ದರೂ ಸಹ ಸುಳ್ಳು ಪ್ರಕರಣ ದಾಖಲು ಮಾಡಿಕೊಂಡು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.